**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಪಿ.ಸಿ.ಆರ್. 23/2026**

**ಸಾಕ್ಷಿಯನ್ನು ದಿನಾಂಕಃ 03.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾರತೀಯ ನಾಗರೀಕ ಸುರಕ್ಷಾ ಸಂಹಿತ ಕಲಂ 223 ರಡಿಯಲ್ಲಿ ನೀಡಿದ ಹೇಳಿಕೆಃ**

**ಪಿರ್ಯಾದುದಾರರ ಪರ ಶ್ರೀ. ಎಸ್.ಎಸ್.ಬಿ. ವಕೀಲರಿಂದಃ**

ನನ್ನ ಹೇಳಿಕೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದನ್ನು ನನ್ನ ಮಾಹಿತಿಯ ಮೇರೆಗೆ ನನ್ನ ವಕೀಲರು ತಯಾರಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ನನ್ನ ಸಹಿಗಳನ್ನು ಹಾಕಿರುತ್ತೇನೆ. ಈ ಕೆಳಗಿನ ದಾಖಲೆಗಳನ್ನು ನಿಶಾನೆಗಳಾಗಿ ಹಾಜರುಪಡಿಸಿರುತ್ತೇನೆ.

ಆರೋಪಿ ನೀಡಿದ ಚೆಕ್ ನ್ನು **ನಿ.ಪಿ.-1** ಎಂದು, ಆರೋಪಿಯ ಸಹಿಯನ್ನು **ನಿ.ಪಿ.-1(ಎ)** ಎಂದು, ಬ್ಯಾಂಕ್‌ನವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-2** ಎಂದು, ಆರೋಪಿಗೆ ವಕೀಲರ ಮುಖಾಂತರ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿ.ಪಿ.-3** ಎಂದು, 02 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿ.ಪಿ.-4 ಮತ್ತು ನಿ.ಪಿ.-5** ಎಂದು, ಆರೋಪಿಯ ವಾಸದ ವಿಳಾಸಕ್ಕೆ ಕಳುಹಿಸಿದ ನೋಟೀಸ್ 'no such person in this address' ಹಾಗು ಆತನ ಕೆಲಸದ ವಿಳಾಸಕ್ಕೆ ಕಳುಹಿಎಸಿದ ನೋಟೀಸ್ 'addressee unclaimed' ಎಂಬ ಷರಾಗಳೊಂದಿಗೆ ಹಿಂತಿರುಗಿ ಬಂದಿದ್ದು, ಸದರಿ ನೋಟೀಸ್ ಗಳ ಅಂಚೆ ಲಕೋಟೆಗಳನ್ನು ಕ್ರಮವಾಗಿ **ನಿ.ಪಿ.-6 ಮತ್ತು ನಿ.ಪಿ.-7** ಎಂದು, ಸದರಿ ಲಕೋಟೆಗಳನ್ನು ತೆರೆದು ನೋಡಲಾಗಿ, ಅವುಗಳಲ್ಲಿ ನೋಟೀಸ್ ಗಳ ಪ್ರತಿಗಳಿದ್ದು, ಅವುಗಳನ್ನು ಕ್ರಮವಾಗಿ **ನಿ.ಪಿ.-6(ಎ) ಮತ್ತು ನಿ.ಪಿ.-7(ಎ)** ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥನೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**